**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತುಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ**

ಸಿ.ಸಿ.ನಂಃ 1876 /2023

CW ( 06 ) PW ( 03 )

ದಿನಾಂಕಃ 24-03-2026 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಂಗಳೇಶ |
| ತಂದೆ ಹೆಸರು | ಹನಮಂತಪ್ಪ ತುರಬಾಳ |
| ವಯಸ್ಸು | 35 ವರ್ಷ |
| ಉದ್ಯೋಗ | ಪಿ ಸಿ ಕೊಪ್ಪಳ ನಗರ ಠಾಣೆ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ನಾನು 2016 ರಿಂದ 2023 ರವರಗೆ ಕೊಪ್ಪಳ ಗ್ರಾಮೀಣ ಠಾಣೆಯಲ್ಲಿ ಪೇದೇ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 12-12-2022 ರಂದು ಮದಾಹ್ನ 12-00 ಗಂಟೆಗೆ ನಾನು ಕಚೇರಿಯಲ್ಲಿದ್ದಾಗ ನನಗೆ ದೂರವಾಣಿ ಮೂಖಾಂತರ ಕೊಡಗದಾಳ ಗ್ರಾಮದ ದುರ್ಗಮನ ದೇವಸ್ಥಾನದ ಹತ್ತಿರ ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದು, ಅಕಾರಣ ನಾನು ಚಾಸಾ -4 ರಿಂದ 6 ರವರೆಗೆ ದಾಳಿಗೆ ನನ್ನೊಂದಿಗೆ ಬರಲು ಸೂಚಿಸಿದ್ದು, ಚಾಸಾ 5 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ಹೇಳಿದ್ದು, ಅದರಂತೆ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ನನಗೆ ಪರಿಚಯಿಸಿದ್ದು, ಅವರಿಗೆ ದಾಳಿಗೆ ಹೋಗುವ ವಿಷಯವನ್ನು ತಿಳಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಮದ್ಯಾಹ್ನ 01.00 ಗಂಟೆಗೆ ನಾನು ಮತ್ತು ಚಾಸಾ 2 ರಿಂದ 6 ರವರ ಜೊತೆ ಇಲಾಖೆ ಜೀಪುನಲ್ಲಿ ಠಾಣೆಯಿಂದ ಹೊರಟು ಮದ್ಯಾಹ್ನ 1.20 ರ ಸುಮಾರಿಗೆ ಗುನ್ನಸ್ಥಳದ ಸಮೀಪ ಸುಮಾರು 100 ಅಡಿ ದೂರದಲ್ಲಿ ಜೀಪನ್ನು ನಿಲ್ಲಿಸಿ ನಾವೆಲ್ಲರೂ ಕಾಲುನಡಿಗೆಯಲ್ಲಿ ಹೋಗಿ ನಿಂತು ನೋಡಲಾಗಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಹಾಗೂ ಖರೀದಿಸಲು ಜನರು ಸೇರಿದ್ದರು.

ನಂತರ ನಾನು ಮತ್ತು ಸಿಬ್ಬಂದಿಗಳು ದಾಳಿ ಮಾಡಿದ್ದು, ನಮ್ಮನ್ನು ನೋಡಿ ಮದ್ಯ ಖರೀದಿಸಲು ಬಂದ ಜನರು ಓಡಿ ಹೋಗಿದ್ದು ಆರೋಪಿ ಯಮನೂರಪ್ಪ ಪೂಜಾರ ಸಿಕ್ಕಿ ಬಿದಿರುತ್ತಾನೆ.

ಅತನನ್ನು ಹಿಡಿದು ವಿಚಾರಿಸಿದಾಗ ಅತನ ಹೆಸರು ಯಮನೂರಪ್ಪ ತಂದೆ ಮರಿಯಪ್ಪ ಪೂಜಾರಿ ಎಂದು ತಿಳಿಸಿದ್ದು, ಅತನ ಬಳಿ ವಿಚಾರಿಸಿದಾಗ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರಲಪಿಲ್ಲ. ನಂತರ ಅತನ ಬಳಿ ಒಂದು ಚೀಲದಲ್ಲಿ ಇದ್ದ ಈ ಕೆಳಕಂಡ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇನೆ.

| | |
|---|---|
| 1. | 90 ಎಂ ಎಲ್ ನ ಹೆಚ್ ಸಿ ವಿಸ್ಕಿ 40 ಟೆಟ್ರಾ ಪ್ಯಾಕೇಟ್ ಗಳು. |

ಈ ಮೇಲಿನ ಮದ್ಯದ ಪ್ಯಾಕೇಟ್ ಗಳನ್ನು ಆರೋಪಿಯ ಬಳಿಯಿಂದ ಚಾಸಾ-1 ರವರು ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಮದ್ಯಾಹ್ನ 1.20 ರಿಂದ 02.20 ರವರೆಗೆ ಪಂಚನಾಮೆಯನ್ನು ಜರುಗಿಸಿ ಗಣಕೀಕೃತಗೊಳಿಸಿ ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿ ಪಡೆದಿರುತ್ತೋನೆ. ಪಂಚನಾಮೆಯನ್ನು ಮುಗಿಸಿ ಮದ್ಯಾಹ್ನ 03.40 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ-1 ರವರು ಚಾಸಾ 9 ರವರಿಗೆ ನನ್ನ ಗಣಕೀಕೃತ ಫಿರ್ಯಾದಿಯನ್ನು ನೀಡಿ, ಪಂಚನಾಮೆ ಮತ್ತು ಮುದ್ದೆಮಾಲುಗಳು ಹಾಗೂ ಆರೋಪಿಯ ಸಮೇತ ಅವರ ವಶಕ್ಕೆ ನೀಡಿರುತ್ತೇನೆ. ನಂತರ ನಾನು ಚಾಸಾ-9 ರವರಿಗೆ ನನ್ನ ಹೇಳಿಕೆನೀಡಿರುತ್ತೇನೆ. ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ. 1 ರಿಂದ 40 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ನುಡಿದಿದ್ದು ಆರೋಪಿ ಗೈರು ಹಾಜರಾಗಿದ್ದು ಆತನ ಪರ ವಕೀಲರು ವಿನಾಯತಿ ಅರ್ಜಿಸಿದ್ದು ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ತಿಳಿಸಿದ್ದು ಸಾಕ್ಷಿ ಆರೊಪಿಯನ್ನು ಗುರುತಿಸಿದ್ದಾರೆ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಚಾಸಾ-2 ಮತ್ತು 3 ರವರಾ ಎಲ್ಲಿಯವರು ಎಂದು ನನಗೆ ಗೊತ್ತಿದೆ. ನಾವುವಾಹನ ನಿಲುಗಡೆ ಮಾಡಿದ ಸ್ಥಳದಿಂದ ಗುನ್ನಾ ಸ್ಥಳ ನೇರವಾಗಿ ಕಾಣಿಸುತ್ತದೆ ಎಂದರೆ ಸರಿ. ವಾಹನ ನಿಲುಗಡೆ ಮಾಡಿದ ಸ್ಥಳದಲ್ಲಿ ಗುನ್ನಾ ಸ್ಥಳವನ್ನು ನಾವು 5 ನಿಮಿಷ ವೀಕ್ಷಣೆಮಾಡಿರುತ್ತೇವೆ. ನಾವು ವೀಕ್ಷಣೆ ಮಾಡಿದಾಗ ಸಾರ್ವಜನಿಕರು ಮದ್ಯದ ಟೆಟ್ರಾ ಪಾಕೇಟಳನ್ನು ಹಣ ನೀಡಿ ಖರೀದಿಸಿಕೊಂಡು ಹೋಗುತ್ತಿದ್ದರು. ನಾವು ದಾಳಿ ಮಾಡಿದಾಗ ಖರೀದಿ ಮಾಡುತತ್ತಿದ್ದರು ಓಡಿ ಹೋಗಿರುತ್ತಾರೇ ಅಂರದೆ ಸರಿ. ಸದರಿ ಸ್ಥಳಲ್ಲಿ ಸಾಕಷ್ಟು ಜನ ಸೇರಿದ್ದರು ಅಂದರೆ ಸರಿ. ಸದರಿ ಸಾರ್ವಜನಿಕರನ್ನು ನಾವು ಪಂಚನಾಮೆಗೆ ಕರೆದಿಲ್ಲ. ಒಟ್ಟು 90 ಎಂ ಎಲ್ ಎನ 40 ಟೆಟ್ರಾ ಪಾಕೇಟಗಳು ಇದ್ದವು. ಅಂದಾಜು 40 ಟೆಟ್ರಾ ಪಾಕೇಟಗಳ ಬೆಲೆ 1405/- ಆಗಿತ್ತು. ಆರೋಪಿಯ ಅಂಗ ಜಪ್ತಿ ಮಾಡಲಾಗಿ ಯಾವುದೇ ಹಣ ದೊರೆತಿರುವುದಿಲ್ಲ. ಆರೋಪಿಗೆ ಟೆಟ್ರಾ

ಪಾಕೇಟಳ ಬಗ್ಗ ವಿಚಾರಿಸಿದಾಗ **2-3** ಅಂಗಡಿಗಳಲ್ಲಿ ತಂದಿರುವುದಾಗಿ ಹೇಳಿರುತ್ತಾನೆ. ಅಂಗಡಿಗಳ ಹೆಸರು ನಾವು ವಿಚಾರಿಸಿಲ್ಲ. ಪಂಚನಾಮೆಯನ್ನು ಚಾಸಾ-1 ರವರು ಬೆರಳಚ್ಚು ಮಾಡಿರುತ್ತಾರೆ. ಠಾಣಗೆ ಬಂದು ಮುದ್ರಣ ತೆಗೆದಿರುತ್ತೇವೆ. ಪಂಚರ ಸಹಿಗಳನ್ನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಪಡೆದಿದ್ದೇವೆ ಅಂದರೆ ಸರಿ.

ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಬಗ್ಗೆ ನನಗೆ ಯವೂದೇ ಮಾಹಿತಿ ಇಲ್ಲದಿದ್ದರೂ ಚಾಸಾ-1 ರವರ ಮಾತ ಕೇಳಿ ಹಾಗೂ ಇಲಾಖೆ ಅಂಕಿ ಅಂಶಗೋಸ್ಕರ ಸುಳ್ಳು ಕೇಸು ದಾಖಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.